ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ 93, ವಸಂತನಗರ

ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ:17-06-2022 ರಂದು ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ತಹಶಿಲ್ದಾರ್ (ಚುನಾವಣೆ) ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನಡೆಸಲಾಯಿತು. ಹಾಗೂ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:93 ಬಿಬಿಎಂಪಿ ಸಭೆಯನ್ನು ನಡೆಸಿಕೊಟ್ಟರು.

ಸಮಿತಿಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳು,

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೊಬೆಲ್ ಸಂಖ್ಯೆ |
|---|---|---|---|
| 1 | ಶ್ರೀಮತಿ.ಮಂಜುಳಮ್ಮ | ನೋಡಲ್ ಅಧಿಕಾರಿಗಳು | |
| 2 | ಶ್ರೀ.ಕೆ.ಜೆ.ಸಿ. ಕುಮಾರ್ | ಸಮಿತಿ ಸದಸ್ಯರು | |
| 3 | ಶ್ರೀಮತಿ. ಚಿತ್ರಾ ವೆಂಕಟೇಶ್ | ಸದಸ್ಯರು | |
| 4 | ಶ್ರೀ.ಪ್ರಕಾಶ್ ನೆಡುಂಗಾಡಿ | ಎಎಪಿ ವಾರ್ಡ್ 93 ಉಸ್ತುವಾರಿ | |
| 5 | ಶ್ರೀ.ಧರ್ಮರಾಜ ಜಿ ನಾಯಕ್ | ಸಹಾಯಕ ಅಭಿಯಂತರರು | |
| 6 | ಶ್ರೀ.ಜಯರಾಜು | ಕೆಲಸ ಪರಿವೀಕ್ಷಕರು | |
| 7 | ಶ್ರೀ.ಮೂರ್ತಿ | ಕಂದಾಯ ವಸೂಲಿಗಾರರು | |
| 8 | ಶ್ರೀ.ಮನೋಜ್‌ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು | |
| 9 | ಶ್ರೀ.ಶರತ್‌ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು | |
| 10 | ಡಾ॥ ಸನಾ | ಆರೋಗ್ಯ ವೈದ್ಯಾಧಿಕಾರಿಗಳು | |

## ಗೈರು ಹಾಜರಾದ ಸದಸ್ಯರು ಮತ್ತು ಅಧಿಕಾರಿಗಳು

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೊಬೆಲ್ ಸಂಖ್ಯೆ |
|---|---|---|---|
| 1 | ಶ್ರೀ.ಲಕ್ಷ್ಮೀಶ (ಲಚ್ಚಿ) | ಸದಸ್ಯರು | |
| 2 | ಕುಮಾರಿ ರೇಣಿಕಾಂಬ | ಹಿರಿಯ ಆರೋಗ್ಯ ಪರಿವೀಕ್ಷಕರು | |
| 3 | ಶ್ರೀ.ಎಂ.ಎಸ್. ನಂಜುಡಮೂತಿ | ಸಾರ್ವಜನಿಕರು | |
| 4 | ಶ್ರೀ.ವೈಭವ್ ಆರ್.ಸಿ | ಸಂಯೋಜಕರು ವಾರ್ಡ್ 93 | |
| 5 | ಶ್ರೀ.ಕೀರ್ತಿ ಎ.ಎಸ್. | ವಾರ್ಡ್ ಮಾರ್ಷಲ್ | |
| 6 | ಶ್ರೀ.ಅಜೇಯ್‌ಕುಮಾರ್ | ಸದಸ್ಯರು | |
| 7 | ಶ್ರೀ. ರಾಜ್ ದುಗ್ಗಾರ್ | ಸದಸ್ಯರು | |
| 8 | ಶ್ರೀ.ಮಾಧವನ್ | ಸದಸ್ಯರು | |
| 9 | ಶ್ರೀ.ರವೀಂದ್ರನಾಥ | ಸದಸ್ಯರು | |
| 10 | ಶ್ರೀಮತಿ.ಲಕ್ಷ್ಮಿದೇವಿ ಆನಂದ | ಸದಸ್ಯರು | |

Scanned with CamSca

| | | | |
|---|---|---|---|
| 11 | ಶ್ರೀಮತಿ.ಜಿ.ಕೆ.ವತ್ಸಲ | ಸದಸ್ಯರು | |
| 12 | ಶ್ರೀಮತಿ. ರಾಧಮ್ಮ | ಸದಸ್ಯರು | |
| 13 | ಶ್ರೀ.ಬಿ.ವಿ ಸುರೇಶ್ | ಸದಸ್ಯರು | |
| 14 | ಶ್ರೀ.ಬಾನು ಪ್ರಕಾಶ್ | ಸದಸ್ಯರು | |
| 15 | ಶ್ರೀ.ಪ್ರಕಾಶ್ ಚಂದ್ರ | ಸದಸ್ಯರು | |
| 16 | ಶ್ರೀಮತಿ.ಪ್ರಿಯಾಚೆಟ್ಟಿ | ಸದಸ್ಯರು | |
| 17 | ಶ್ರೀ.ಸುನಿಲ್‌ಕುಮಾರ್ | ಸದಸ್ಯರು | |
| 18 | ಶ್ರೀ. ಸಂದೀಪ್ ಸಿಂಗ್ | ಬೀದಿ ದೀಪ ನಿರ್ವಹಣೆ ಬೆಸ್ಕಾಂ | |
| 19 | ಡಾ॥ ಸೈಯದ್ ಇಸ್ಮಾಯಿಲ್ | ಆರೋಗ್ಯ ವೈದ್ಯಾಧಿಕಾರಿಗಳು | |
| 20 | ಶ್ರೀ.ಗೋವಿಂದಗೌಡ | ತೋಟಗಾರಿಕೆ ಇಲಾಖೆ | |
| 21 | ಶ್ರೀ. ಮಹಮದ್ ಜಾವೇದ್.ಎ.ಎಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | |
| 22 | ಶ್ರೀ.ಕೋದಂಡರೆಡ್ಡಿ | ಸಹಾಯಕ ಅಭಿಯಂತರರು ಸ್ಮಾರ್ಟ್ ಸಿಟಿ | |
| 23 | ಶ್ರೀ.ನವೀನ್‌ಕುಮಾರ | ವೈದ್ಯಾಧಿಕಾರಿ ಶಿವಾಜಿನಗರ | |
| 24 | ಶ್ರೀ.ನಬಿ | ಆರಕ್ಷಕ ಉಪ ನಿರೀಕ್ಷಕರು | |
| 25 | ಶ್ರೀ.ದುರ್ಗಾಪ್ರಸಾದ್ | ಸಹಾಯಕ ಅಭಿಯಂತರರು ವಿದ್ಯುತ್ ಇಲಾಖೆ ಬೀದಿ ನಿರ್ವಹಣೆ | |
| 26 | ಶ್ರೀ.ಮಹೇಶ್‌ಕುಮಾರ್ | ಸಹಾಯಕ ಅಭಿಯಂತರರು ಘ.ತ್ಯಾ | |
| 27 | ಶ್ರೀಮತಿ.ವೀಣಾ | ಸಹಾಯಕ ಕಂದಾಯ ಅಧಿಕಾರಿ | |

**ದಿನಾಂಕ:17-06-2022 ರಂದು ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗೆಳು**

1) ಶ್ರೀಮತಿ. ಮಂಜುಳಮ್ಮ ನೋಡಲ್ ಆಧಿಕಾರಿಗಳು ಸಮಿತಿ ಸಭೆಯ ಎಲ್ಲಾ ಅಧಿಕಾರಿಗಳು ಹಾಗೂ ಸದಸ್ಯರನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು ಹಾಗೂ ಹಿಂದಿನ ಸಭೆಯ ನಡಾವಳಿಗಳನ್ನು ಸಭೆಗೆ ಮಂಡಿಸಿದರು.

2) ಸಭೆಯ ನಡಾವಳಿಗಳು ಹಾಗೂ ತೆಗೆದುಕೊಂಡು ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಲಾಯಿತು. ಹಾಗೂ ಇಂದಿನ ಸಭೆಯಲ್ಲಿ ಚರ್ಚಿಸುವ ಸಂಬಂಧ ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಲಾಯಿತು.

3) ಸಮಿತಿ ಸದಸ್ಯರಾದ ಶ್ರೀ.ಕೆ.ಜೆ.ಸಿ.ಕುಮಾರ್ ರವರು ಮಾತನಾಡಿ ರೈಲ್ವೆ ಸಮಾನಾಂತರ ರಸ್ತೆಯಲ್ಲಿ 6 ಬೀದಿ ದೀಪಗಳು ಉರಿಯುತ್ತಿದ್ದು, ಇನ್ನು 14 ದೀಪಗಳು ಉರಿಯುತ್ತಿರುವುದಿಲ್ಲ ಈ ಬಗ್ಗೆ ಬೀದಿ ದೀಪಗಳ ನಿರ್ವಹಣಾ ಇಂಜಿನಿಯರ್ ಸಂದೀಪ್‌ಸಿಂಗ್ ರವರು ಕ್ರಮಕೈಗೊಳ್ಳದೆ ಇರುವುದು ಮತ್ತು ಪದೆಪದೇ ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಿ ಆಗುತ್ತಿರುವುದನ್ನು ಗಂಭೀರವಾಗಿ ಆಕ್ಷೇಪಿಸಿದರು ಮತ್ತು ರೈಲ್ವೆ ಸಮಾನಾಂತರ ರಸ್ತೆಯಲ್ಲಿ ಹೋಟೆಲ್ 1179 ಮುಂದೆ ಇರುವ ಬೀಡಾ ಅಂಗಡಿಯನ್ನು ತೆರವುಗೊಳಿಸುವಂತೆ ಮತ್ತು ಸದರಿ ರಸ್ತೆಯಲ್ಲಿ ಒಂದೇ ಕಡೆ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಿದ್ದಲ್ಲಿ ಪಾಲಿಕೆಗೆ ಆದಾಯ ಆಗುವುದರೊಂದಿಗೆ ವಾಹನ ದಟ್ಟಣೆ ಕೂಡ ನಿವಾರಿಸಬಹುದು ಎಂದು ಹೇಳುತ್ತಾ, ಪಾದಚಾರಿ ಮಾರ್ಗದ ಪಕ್ಕದಲ್ಲಿ ತಳ್ಳುವಗಾಡಿಗಳನ್ನು ಇಟ್ಟು ವ್ಯಾಪಾರ ಮಾಡುತ್ತಿರುವುದನ್ನು ತಡೆಗಟ್ಟುವ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಿದರು.

Scanned with CamSca

4) ಶ್ರೀಮತಿ.ಚಿತ್ರವೆಂಕಟೇಶ ರವರು ಮಾತನಾಡಿ ಪದೆಪದೇ ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳನ್ನು ಪ್ರಸ್ತಾಪಿಸಲು ನಿರಾಕರಿಸಿ ವಸಂತನಗರದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಲ್ಲಿ ಹಿರಿಯ ನಾಗರೀಕರಿಗೆ ಬೂಸ್ಟರ್‌ಡೋಸ್ ಸಮರ್ಪಕವಾಗಿ ಸರಬರಾಜು ಇಲ್ಲದೆ ದಿನಂಪ್ರತಿ 10 ಜನರಿಗೆ ಮಾತ್ರ ಬೂಸ್ಟರ್‌ಡೋಸ್ ನೀಡುತ್ತಿರುವುದು ಕಂಡು ಬಂದಿದ್ದು ಈ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ, ಬೀದಿದೀಪಗಳ ನಿರ್ವಹಣಾ ಮತ್ತು ಸಂಚಾರ ಪೊಲೀಸ್ ಇಲಾಖೆಯ ಅಧಿಕಾರಿಗಳು ವಾರ್ಡ್ ಸಮಿತಿ ಸಭೆಗೆ ನಿರಂತವಾಗಿ ಹಾಜರಾಗದೇ ಇರುವುದನ್ನು ಗಮನಿಸಿ ಅಸಮದಾನ ವ್ಯಕ್ತಪಡಿಸಿದರು.

5) ಶ್ರೀ. ಪ್ರಕಾಶ ನೆಡುಂಗಾಡಿ ಎಎಪಿ ವಾರ್ಡ್ ಉಸ್ತುವಾರಿಗಳು ಮಾತನಾಡಿ ವಸಂತನಗರ 6ನೇ ಮತ್ತು 8ನೇ ಮುಖ್ಯರಸ್ತೆ ಮತ್ತು ಕುಮಾರಪಾರ್ಕ್ 5ನೇ ಮುಖ್ಯರಸ್ತೆಗಳಲ್ಲಿನ ರಾಜಕಾಲುವೆಗಳ ಶಾಶ್ವತವಾಗಿ ದುರಸ್ಥಿ ಮಾಡಲು ಸೂಚಿಸುತ್ತಾ, 7ನೇ ಅಡ್ಡರಸ್ತೆಯಲ್ಲಿನ ಬಿಬಿಎಂಪಿ ಮಾರ್ಕೆಟ್ ಬಳಿ ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸಿ, ಜಸ್ಮಾದೇವಿ ಭವನದ ಮುಂಭಾಗದಲ್ಲಿನ ಸಾರ್ವಜನಿಕ ಶೌಚಾಲಯವನ್ನು ದುರಸ್ಥಿಗೊಳಿಸಲು ಸೂಚಿಸಿದರು.

6) ಸಭೆಯಲ್ಲಿ ಮಾನ್ಯ ನೋಡಲ್ ಅಧಿಕಾರಿಗಳು ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ಕ್ರಮಕೈಗೊಳ್ಳಲು ಆದೇಶಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು

ಸಹಿ/-
ಮಾನ್ಯ ನೋಡಲ್ ಅಧಿಕಾರಿಗಳು
ವಾರ್ಡ್-93, ವಸಂತನಗರ
ಬಿ.ಬಿ.ಎಂ.ಪಿ

ಸದಸ್ಯ ಕಾರ್ಯದರ್ಶಿಗಳು
ವಾರ್ಡ್-93, ವಸಂತನಗರ
ಬಿ.ಬಿ.ಎಂ.ಪಿ

Scanned with CamScanner